ಕನ್ನಡಕ್ಕಾಗಿ ದುಡಿದ ಮಹನೀಯರು

ಸರಸ್ವತಿ ವಿಜಯನಾರಸಿಂಹ

ಕನ್ನಡ ರಾಜ್ಯೋತ್ಸವವನ್ನು ಕೇವಲ ಸಭೆ ಸಮಾರಂಭಗಳಿಗೆ ಮೀಸಲಿಡದೆ ಅರ್ಥಪೂರ್ಣವಾಗಿ ನಾಡಿನ ಸಂಸ್ಕೃತಿ ಸಾಹಿತ್ಯಗಳಿಗೆ ಕೊಡುಗೆ ನೀಡುವಂತಾಗಬೇಕು. ಹೊರದೇಶದವರೂ ಈ ನಮ್ಮ ಭಾಷೆಯ ಮಾಧುರ್ಯಕ್ಕೆ ಮಾರುಹೋಗಿ ದುಡಿದಿದ್ದಾರೆ. ಅವರ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕಿ ಬೆಂಗಳೂರಿನವರು.

ಫರ್ಡಿನೆಂಡ್ ಕಿಟ್ಟೆಲ್

ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು ಎನ್ನುವುದು ಒಂದು ಕವಿವಾಣಿ. ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಕನ್ನಡಕ್ಕಾಗಿ ದುಡಿದವರನ್ನು ಸ್ಮರಿಸುವುದು ಒಂದು ಪುಣ್ಯ ಕಾರ್ಯ. ಇದರಲ್ಲಿ ವಿದೇಶೀಯರು, ಸ್ವದೇಶೀಯರು ಎಂಬ ಭಿನ್ನಭೇದವಿಲ್ಲ. ಆಂಗ್ಲರ ಆಡಳಿತವು ಭಾರತದಲ್ಲಿ ಬೇರುಬಿಟ್ಟನಂತರ ಪಾಶ್ಚಾತ್ಯ ಜಗತ್ತಿನ ಕೆಲವು ಮೇಧಾವಿಗಳು ಸಂವಹನದ ಸೌಲಭ್ಯಕ್ಕಾಗಿ ಕನ್ನಡ ಭಾಷೆಯಲ್ಲಿ ಪರಿಣತಿ ಪಡೆದು ಕನ್ನಡ ಸಾಹಿತ್ಯಕ್ಕೂ ಕೊಡುಗೆಯಿತ್ತಿದ್ದಾರೆ.

ಫರ್ಡಿನೆಂಡ್ ಕಿಟ್ಟೆಲ್ : ಇವರು ಕನ್ನಡ-ಇಂಗ್ಲಿಷ್ ನಿಘಂಟನ್ನು ಅಪಾರ ಶ್ರದ್ಧೆಯಿಂದ ಹಾಗೂ ಅಸೀಮ ಪರಿಶ್ರಮದಿಂದ ಸಿದ್ಧಪಡಿಸಿ ಕನ್ನಡಭಾಷೆಯನ್ನು ಸಿರಿವಂತಗೊಳಿಸಿದ ಮಹಾನುಭಾವರು. ಇವರು ಜರ್ಮನಿಯ ರೊಸ್ಟೆರ್ ಹಾಫೆ ಎಂಬ ಊರಿನಲ್ಲಿ ೧೮೩೨ರಲ್ಲಿ ಜನಿಸಿದರು. ಇವರ ತಂದೆ ಗಾಟ್‌ಫ್ರೀಟ್ ಕಿಟ್ಟೆಲ್ ಕ್ರೈಸ್ತಮತದ ಧರ್ಮಾಧಿಕಾರಿಯಾಗಿದ್ದರು. ಮಿಷನರಿ ವಾತಾವರಣದಲ್ಲಿ ಬೆಳೆದ ಫರ್ಡಿನೆಂಡ್ ಕಿಟ್ಟೆಲ್ ಹುಟ್ಟೂರಿನಲ್ಲಿ ಪ್ರಾರಂಭಿಕ ಶಿಕ್ಷಣ ಪೂರೈಸಿ ಸ್ವಿಟ್ಜರ್‌ಲೆಂಡಿನ ಬಾಸೆಲ್ ನಗರದ ಮಿಷನ್ ಕಾಲೇಜಿಗೆ ಸೇರಿ ಉನ್ನತ ವ್ಯಾಸಂಗದಲ್ಲಿ ಮೂರು ವರ್ಷಗಳನ್ನು ಕಳೆದರು. ಪಾದ್ರಿಯಾಗಿ ನೇಮಕಗೊಂಡು, ಭಾರತಕ್ಕೆ ಬಂದು, ಧಾರವಾಡದಲ್ಲಿ ನೆಲೆಸಿದರು. ೧೮೫೩ರಿಂದ ಈ ಪಾದ್ರಿ ಕೆಲಸದಲ್ಲಿ ಮಂಗಳೂರು, ಮಡಿಕೇರಿ, ಹುಬ್ಬಳ್ಳಿ, ಧಾರವಾಡಗಳ ಸಂಚಾರ ಕೈಗೊಂಡರು. ಕನ್ನಡದತ್ತ ಇವರ ಒಲವು ಬೆಳೆಯುತ್ತಾ ಬಂದಿತು. ತಮ್ಮ ಸಂಚಾರದ ದಿನಗಳಲ್ಲಿ ಭಾಷೆಯನ್ನು ಕಲಿಯಲಾರಂಭಿಸಿದರು. ಬಹಳ ಬೇಗ ಕನ್ನಡವನ್ನು ಶುದ್ಧವಾಗಿ ಮಾತನಾಡತೊಡಗಿದರು. ಭಾಷೆಯಲ್ಲಿ ಪರಿಣತಿ ಪಡೆದು ಸಾಹಿತ್ಯದತ್ತ ಆಕರ್ಷಿತರಾಗಿ ಅಧ್ಯಯನದಲ್ಲಿ ತೊಡಗಿದರು.

ಇವರು ಪಾಲಿನ್ ಈತ್ ಎಂಬ ಜರ್ಮನ್ ಕನ್ಯೆಯನ್ನು ೧೮೬೦ರಲ್ಲಿ ಮದುವೆಯಾದರು. ಮಂಗಳೂರಿನಲ್ಲಿ ಮನೆಮಾಡಿ ನೆಮ್ಮದಿಯ ಜೀವನವನ್ನು ತಮ್ಮದಾಗಿಸಿಕೊಂಡರು. ಇಬ್ಬರು ಗಂಡುಮಕ್ಕಳ ತಾಯಿಯಾದ ಪಾಲಿನ್ ೪-೫ ವರ್ಷಗಳಲ್ಲಿಯೇ ಮಂಗಳೂರಿನಲ್ಲಿ ತೀರಿಕೊಂಡಳು. ಭಾರತೀಯ ಜೀವನಾದರ್ಶವನ್ನು ಮೈಗೂಡಿಸಿಕೊಂಡಿದ್ದ ಕಿಟ್ಟೆಲ್ ತಮ್ಮ ಪತ್ನಿಯ ಅಗಲುವಿಕೆಯ ನೋವನ್ನು ಮರೆಯಲು ಸಂಪೂರ್ಣವಾಗಿ ತಮ್ಮನ್ನು ಕನ್ನಡಕ್ಕೆ ಸಮರ್ಪಿಸಿಕೊಂಡರು. ಕನ್ನಡ ಭಾಷೆಯಲ್ಲಿ ಕಿಟ್ಟೆಲ್‌ರಿಗಿದ್ದ ಪಾಂಡಿತ್ಯವನ್ನು ತಿಳಿದಿದ್ದ ಬಾಸೆಲ್ ಮಿಷನ್ನಿನ ಅಧಿಕಾರಿಗಳು ಕನ್ನಡ-ಇಂಗ್ಲಿಷ್ ನಿಘಂಟನ್ನು ರಚಿಸುವ ಕೆಲಸವನ್ನು ಕಿಟ್ಟೆಲ್‌ಗೆ ಒಪ್ಪಿಸಿ, ಅದಕ್ಕೆ ಬೇಕಾಗುವ ಎಲ್ಲ ಬಗೆಯ ಸಹಾಯ ಸೌಲಭ್ಯಗಳನ್ನೂ ಒದಗಿಸುವ ಮಾತುಕೊಟ್ಟರು.

ಈ ವೇಳೆಗಾಗಲೇ ಕನ್ನಡ-ಇಂಗ್ಲಿಷ್ ನಿಘಂಟಿನ ಕೆಲಸವನ್ನು ರೆವರೆಂಡ್ ರೀವ್ ಪ್ರಾರಂಭಿಸಿದ್ದರೂ ಅದು ಪೂರ್ಣವಾಗದೆ ಉಳಿದಿತ್ತು. ಅಧ್ಯಯನದ ದೃಷ್ಟಿಯಿಂದಲೂ ಅವರ ಕೆಲಸ ಕನ್ನಡದ ದಿಗ್ಗಜರಿಗೆ ತೃಪ್ತಿ ತರುವಂತಿರಲಿಲ್ಲ. ಹೊಸತೊಂದು ನಿಘಂಟಿನ ಆವಶ್ಯಕತೆ ಇತ್ತು. ನಿಘಂಟಿನ ಕೆಲಸವನ್ನು ಸಂತೋಷದಿಂದ ಒಪ್ಪಿಕೊಂಡ ಕಿಟ್ಟೆಲ್ ಉತ್ಸಾಹದಿಂದ ಈ ಮಹತ್ಕಾರ್ಯದಲ್ಲಿ ಲೀನರಾದರು. ನಿಘಂಟಿನ ರೂಪುರೇಷೆ ೧೮೬೨ರಲ್ಲಿ ಪ್ರಾರಂಭವಾಯಿತು. ಹಸ್ತಪ್ರತಿಯು ಸಿದ್ಧತೆಯಲ್ಲಿದ್ದಾಗ ಕಿಟ್ಟೆಲ್‌ರ ಆರೋಗ್ಯ ಕೆಟ್ಟಿತು. ಹವಾ ಬದಲಾವಣೆಗಾಗಿ ೧೮೭೭ರಲ್ಲಿ ಜರ್ಮನಿಗೆ ತೆರಳಿದರು. ೧೮೫೩ರವರೆಗೂ ಎಸ್ಲಿಂಗೆನ್ ಎಂಬಲ್ಲಿ ನೆಲಸಿ ನಿಘಂಟಿನ ಕರಡು ಪ್ರತಿಯನ್ನು ಸಿದ್ಧಪಡಿಸಿದರು. ತಮ್ಮ ಕೆಲಸದ ಬಗ್ಗೆ ಒಪ್ಪಿಗೆ ಹಾಗೂ ಸ್ವೀಕಾರವನ್ನು ಪಡೆಯಲು ಧಾರವಾಡಕ್ಕೆ ಬಂದು ಕನ್ನಡದ ಪಂಡಿತರೊಂದಿಗೆ ಪರಿಷ್ಕರಣ ಕಾರ್ಯ ಪ್ರಾರಂಭಿಸಿದರು. ೭೦,೦೦೦ ಶಬ್ದಗಳನ್ನೊಳಗೊಂಡ ಹಸ್ತಪ್ರತಿಯನ್ನು ೧೮೮೫ರಲ್ಲಿ ಬಾಸೆಲ್ ಮಿಷನ್ ಸಂಸ್ಥೆಯವರಿಗೆ ಒಪ್ಪಿಸಿದರು.

ಕರಡು ಪ್ರತಿಗಳನ್ನು ಜೋಡಿಸಿ, ತಿದ್ದುವಲ್ಲಿ ಒಂದೊಂದು ಪದದ ಅರ್ಥಕ್ಕೂ ಹೆಚ್ಚು ಮಾನ್ಯತೆ ಕೊಟ್ಟು ಶ್ರಮಿಸಿದ್ದುದ

ರಿಂದ ಕಣ್ಣು ನೋವು ಮತ್ತು ನರಗಳ ದೌರ್ಬಲ್ಯವುಂಟಾಗಿ ಮತ್ತೆ ಅವರನ್ನು ಜರ್ಮನಿಗೆ ಮರಳುವಂತೆ ಮಾಡಿತು. ಬೃಹತ್ ಪ್ರಮಾಣದ ನಿಘಂಟು, ಕೋಶಕ್ಕೆ ಮೊದಲ ಮಾತುಗಳನ್ನು ಜರ್ಮನಿಯಿಂದಲೇ ಬರೆದು ಕಳಿಸಿದರು. ಕೋಶಸಂಪಾದನಾ ಕಾರ್ಯಕ್ಕೆ ಬಳಸಿದ ಕೃತಿಗಳ ಪಟ್ಟಿಯನ್ನೂ ಕಿಟ್ಟೆಲ್‌ರವರು ಕೊಟ್ಟಿದ್ದಾರೆ. ಲಿಪ್ಯಂತರ ಮಾಡುವಾಗ ಬಳಸಿರುವ ಸಂಜ್ಞೆಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ದ್ರಾವಿಡ ಭಾಷೆಗಳಿಂದ ಸಂಸ್ಕೃತಕ್ಕೆ ಸೇರಿರಬಹುದಾದ ಪದಗಳ ಬಗ್ಗೆಯೂ ಹೇಳಿದ್ದಾರೆ. ಸಂಸ್ಕೃತ ಶಬ್ದಗಳನ್ನು ರೋಮನ್ ಅಕ್ಷರದ ಮಾದರಿಯಲ್ಲಿ ಹಾಗೂ ಕನ್ನಡ ಪದಗಳನ್ನು ಆಂಟಿಕ್ ಅಕ್ಷರದ ಮಾದರಿಯಲ್ಲಿ ಕೊಟ್ಟು ನಿಘಂಟಿನ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಒಂದು ಪದವನ್ನು ಕೊಟ್ಟು, ವಿವಿಧ ರೂಪಗಳಲ್ಲಿ, ಸಮಾಸಗಳಲ್ಲಿ ಅದು ತೋರಿ ಬರುವ ರೀತಿಯನ್ನೂ ತಿಳಿಸಿ, ಆ ಪದಕ್ಕೆ ಸಂಬಂಧಿಸಿದ ಗಾದೆಗಳನ್ನೂ ಕೊಟ್ಟಿರುವುದು ಈ ನಿಘಂಟಿನ ವೈಶಿಷ್ಟ್ಯ. ಓದುಗರು ಪದಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ಅರ್ಥಗಳನ್ನು ಹುಡುಕುವಾಗ ಎಲ್ಲಿ ಏನನ್ನು ನೋಡಬೇಕು ಎಂಬ ಅಂಶಗಳನ್ನೂ ತಿಳಿಸಿ ಆಯಾ ಗ್ರಂಥಗಳ ಹೆಸರು, ಪರಿಚ್ಛೇದ, ಪುಟ ಸಂಖ್ಯೆಗಳನ್ನೂ ತಿಳಿಸಿದ್ದಾರೆ. ಪದರೂಪವು ಉಳಿದ ದ್ರಾವಿಡ ಭಾಷೆಗಳಲ್ಲಿ ಹೇಗಿದೆ ಎಂಬುದನ್ನೂ ತಿಳಿಸಿರುವುದು ಈ ನಿಘಂಟಿನ ಹೆಗ್ಗಳಿಕೆ.

ಇಷ್ಟು ಖಚಿತವೂ, ಸುವ್ಯವಸ್ಥಿತವೂ ಆದ ನಿಘಂಟು ಭಾರತದ ಇತರ ದೇಶೀಯ ಭಾಷೆಗಳಲ್ಲಿ ಆ ಕಾಲಕ್ಕೆ ಇನ್ನೂ ಬಂದಿರಲಿಲ್ಲವೆಂಬುದು ಬಲ್ಲವರ ಅಭಿಪ್ರಾಯ. ಟ್ಯೂಬಿಂಗನ್ ವಿಶ್ವವಿದ್ಯಾನಿಲಯವು ಕಿಟ್ಟೆಲ್‌ರವರ ಪರಿಶ್ರಮವನ್ನು ಶ್ಲಾಘಿಸಿ ಅವರಿಗೆ ಪಿಎಚ್.ಡಿ. ಪದವಿ ನೀಡಿ, ಗೌರವಿಸಿತು.

ಕೇಶಿರಾಜನ 'ಶಬ್ದಮಣಿದರ್ಪಣ'ವನ್ನು ಒಂಬತ್ತು ಹಸ್ತ ಪ್ರತಿಗಳಲ್ಲಿ ಸಂಗ್ರಹಿಸಿ ವಿದ್ವತ್ಪೂರ್ಣ ಮುನ್ನುಡಿಯೊಂದಿಗೆ ಕಿಟ್ಟೆಲ್‌ರವರೇ ಪ್ರಕಟಿಸಿದರು. ನಿಘಂಟಿನ ಕಾರ್ಯದೊಂದಿಗೇ ನಾಗವರ್ಮನ 'ಛಂದೋಂಬುಧಿ'ಯನ್ನೂ ಶಾಸ್ತ್ರೀಯವಾಗಿ ಪರಿಷ್ಕರಿಸಿದರು. ಇದರೊಂದಿಗೆ ೧೯ನೆಯ ಶತಮಾನದವರೆಗಿನ ಕನ್ನಡ ಸಾಹಿತ್ಯವನ್ನೂ ಹಾಗೂ ಅದರ ಬೆಳವಣಿಗೆಯನ್ನೂ ಸ್ಥೂಲವಾಗಿ ಪರಿಚಯ ಮಾಡಿರುವುದಲ್ಲದೆ 'ಪಂಚತಂತ್ರ' ಮತ್ತು 'ಕರ್ನಾಟಕ ಕಾವ್ಯಮಾಲೆ' ಎಂಬ ಗ್ರಂಥಗಳನ್ನೂ ಸಂಪಾದಿಸಿ ಪ್ರಕಟಿಸಿದ್ದಾರೆ.

ಕನ್ನಡದ ಆರು ಪಠ್ಯಪುಸ್ತಕಗಳನ್ನಲ್ಲದೆ ಕ್ರೈಸ್ತಧರ್ಮಕ್ಕೆ ಸಂಬಂಧಿಸಿದ ೧೮ ಕೃತಿಗಳನ್ನೂ ಕಿಟ್ಟೆಲ್ ಬರೆದಿದ್ದಾರೆ. 'ಇಂಡಿಯನ್ ಆ್ಯಂಟಿಕ್ವಿಟಿ' ಮುಂತಾದ ಪ್ರೌಢ ಪತ್ರಿಕೆಗಳಲ್ಲಿ ಕನ್ನಡ ಭಾಷೆಯ ಹಿರಿಮೆಯ ಬಗ್ಗೆ ೨೪ ಲೇಖನಗಳನ್ನು ಬರೆದು ಭಾಷೆಗೆ ಪ್ರಚಾರ ನೀಡಿದ್ದಾರೆ. 'ಗ್ರ್ಯಾಮರ್ ಆಫ್ ದಿ ಕನ್ನಡ ಲ್ಯಾಂಗ್ವೇಜ್' ಎಂಬ ಕನ್ನಡ ವ್ಯಾಕರಣ ಪುಸ್ತಕವು ಕಿಟ್ಟೆಲ್ ರಚಿಸಿದ ಕೊನೆಯ ಮಹಾಕೃತಿ. ಅದರ ಪ್ರಕಟಣೆಗಾಗಿ, ಪರಿಪೂರ್ಣತೆಗಾಗಿ ಕಿಟ್ಟೆಲ್ ತಮ್ಮ ಚೈತನ್ಯವನ್ನೇ ಧಾರೆ ಎರೆದರು. ೧೯೦೩ರ ಡಿಸೆಂಬರ್ ೧೮ರಂದು ಪ್ರಕಟಗೊಂಡ ಈ ಕೃತಿ ತಮ್ಮ ಕೈಸೇರಿದಾಗ ಕಿಟ್ಟೆಲ್ ಭಾವಪರವಶರಾದರು. ಆ ಕೃತಿಯನ್ನೇ ಮುಟ್ಟಿ ಮುಟ್ಟಿ ಆನಂದಿಸಿದರು. ಧನ್ಯತೆಯ ಭಾವ ಅವರಲ್ಲಿ ಮೂಡಿ ಬಂದಿತು. ಆ ಧನ್ಯತೆಯಲ್ಲಿಯೇ ಆ ಜೀವ ಮಾರನೆಯ ಬೆಳಗನ್ನು ನೋಡದೆ ಕನ್ನಡನುಡಿ ದೇವಿಯ ಪಾದಗಳಲ್ಲಿ ಸೇರಿತ್ತು.

ಬಿ.ಎಲ್.ರೈಸ್ ಇವರ ಪೂರ್ಣ ಹೆಸರು ಬೆಂಜಮಿನ್ ಲೂಯಿ ರೈಸ್. ಇವರು ೧೮೩೭ರಲ್ಲಿ ಭಾರತದಲ್ಲಿ ಜನಿಸಿದರಾದರೂ ಇಂಗ್ಲೆಂಡಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ, ಭಾರತಕ್ಕೆ ಮರಳಿ ಬಂದು ಬೆಂಗಳೂರಿನ 'ಸೆಂಟ್ರಲ್ ಹೈಸ್ಕೂಲ್'ನಲ್ಲಿ ಐದು ವರ್ಷಗಳ ಕಾಲ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ನಂತರ ಮೈಸೂರು ಮತ್ತು ಕೊಡಗು ಪ್ರಾಂತ್ಯಗಳ ಶಾಲಾ ಇನ್‌ಸ್ಪೆಕ್ಟರ್ ಆದರು. ೧೮೬೮ರಲ್ಲಿ ಶಿಕ್ಷಣ ಇಲಾಖೆಯ ಮುಖ್ಯಾಧಿಕಾರಿಯಾಗಿಯೂ, ೧೮೮೩ರಲ್ಲಿ ಶಿಕ್ಷಣ ಇಲಾಖೆಯ ಪ್ರಥಮ ಕಾರ್ಯದರ್ಶಿಯಾಗಿಯೂ ನೇಮಕವಾದರು. ಬಿಡುವಿನ ವೇಳೆಯನ್ನು ಕನ್ನಡ ವ್ಯಾಸಂಗಕ್ಕಾಗಿ ಬಳಸಿಕೊಂಡರು. ಅಪಾರ ಪಾಂಡಿತ್ಯವಿದ್ದ ಇವರಿಗೆ ಕನ್ನಡ ನಾಡಿನ ಉದ್ದಗಲಕ್ಕೂ ಇಲಾಖೆಯ ಕೆಲಸದ ಮೇಲೆ ಸಂಚಾರ ಮಾಡುವಾಗ ಅಲ್ಲಲ್ಲಿಯ ಶಾಸನಗಳನ್ನು ನೋಡುವ ಹಾಗೂ ಸಂಗ್ರಹಿಸುವ ಹವ್ಯಾಸವೂ ಇತ್ತು. ಶಾಸನದ ವಿಷಯಗಳನ್ನು ಆಗಾಗ ಪ್ರಕಟಿಸುತ್ತಿದ್ದರು. ಮೈಸೂರು ಗೆಜ಼ೆಟಿಯರ್‌ನ ಎರಡು ಸಂಪುಟಗಳನ್ನು ೧೮೭೭-೭೮ರಲ್ಲಿ ಪ್ರಕಟಿಸಿದರು. ೧೮೮೧ರಲ್ಲಿ ನಡೆದ ಮೊದಲು ಖಾನೇಷುಮಾರಿಯ (ಜನ ಗಣತಿ) ವರದಿಯನ್ನೂ ಮಾಡಿದರು.

೧೮೮೪ರಲ್ಲಿ ಆರಂಭವಾದ ಮೈಸೂರು ಪ್ರಾಚ್ಯ ವಸ್ತು ಇಲಾಖೆಯನ್ನು ಶಿಕ್ಷಣ ಇಲಾಖೆಯ ಜೊತೆಗೆ ರೈಸ್‌ರವರೇ ವಹಿಸಿಕೊಂಡು ಕಾರ್ಯತತ್ಪರರಾದರು. ಕೊಡಗಿನ ಶಾಸನಗಳನ್ನು ಸಂಗ್ರಹಿಸಿ ಪ್ರತ್ಯೇಕ ಸಂಪುಟವಾಗಿ ಪ್ರಕಟಿಸಿದರು. ಇದು 'ಎಪಿಗ್ರಾಫಿಯ ಕರ್ನಾಟಿಕ' ಮಾಲೆಗೆ ನಾಂದಿಯಾಯಿತು. ಶಾಸನಗಳ ಪ್ರಾಮುಖ್ಯತೆಯನ್ನು ಅರಿತಿದ್ದ ಆಗಿನ ಸರ್ಕಾರ ರೈಸ್‌ರವನ್ನು ಪುರಾತತ್ವ ಇಲಾಖೆಯ ಪೂರ್ಣಕಾಲದ ಅಧಿಕಾರಿಯಾಗಿ ೧೮೯೦ರಲ್ಲಿ ನೇಮಕ ಮಾಡಿತು. ಮುಂದೆ ಹದಿನಾರು ವರ್ಷಗಳ ಕಾಲ ಕರ್ನಾಟಕದ ಪ್ರತಿ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲೂ ಸಂಚರಿಸಿ ಹನ್ನೆರಡು ಸಂಪುಟಗಳಲ್ಲಿ

ಬಿ.ಎಲ್.ರೈಸ್

ಅವುಗಳನ್ನು ಪ್ರಕಟಗೊಳಿಸಿದರು. ಇವರು ಪ್ರಕಟಿಸಿದ ಕರ್ನಾಟಕದ ಶಾಸನಗಳ ಒಟ್ಟು ಸಂಖ್ಯೆ ೮೮೬. ಈ ಶಾಸನಗಳಿಂದ ತಿಳಿದುಬರುವ ರಾಜಕೀಯ ಇತಿಹಾಸವನ್ನು **ಮೈಸೂರ್ ಅಂಡ್ ಕೂರ್ಗ್ ಫ್ರಂ ಇನ್‌ಸ್ಕ್ರಿಪ್ಷನ್ಸ್** ಎಂಬ ಗ್ರಂಥದಲ್ಲಿ ಇವರು ವಿವರವಾಗಿ ತಿಳಿಸಿದ್ದಾರೆ. ಇವರು ಸಂಗ್ರಹಿಸಿದ ಓಲೆಗರಿ ಗ್ರಂಥಗಳಿಗಾಗಿ **ಓರಿಯಂಟಲ್ ಲೈಬ್ರರಿ ಆಫ್ ಕರ್ನಾಟಕ** ಎಂಬ ಪ್ರಾಚ್ಯ ಗ್ರಂಥಭಂಡಾರವೂ ಆರಂಭಗೊಂಡಿತು.

ಇವರು ಪಂಪಭಾರತ, ಪಂಪರಾಮಾಯಣ, ಶಬ್ದಾನುಶಾಸನ ಮೊದಲಾದ ಪ್ರಾಚೀನ ಗ್ರಂಥಗಳನ್ನು ಸಂಗ್ರಹಿಸಿ 'ಬಿಬ್ಲಿಯೋಥಿಕ ಕರ್ನಾಟಕ' ಗ್ರಂಥಮಾಲೆಯಲ್ಲಿ ಹೊರತಂದಿದ್ದಾರೆ. ತಮ್ಮ ೭೦ನೆಯ ವಯಸ್ಸಿನವರೆಗೂ ಪುರಾತನ ಶಾಸನಗಳ ಅಧ್ಯಯನ ಹಾಗೂ ಪ್ರಾಚ್ಯ ಸಂಶೋಧನೆಯಲ್ಲಿಯೇ ತೊಡಗಿದ್ದ ಇವರು ಇಂಗ್ಲೆಂಡಿಗೆ ಮರಳಿದ ಸ್ವಲ್ಪ ಕಾಲದಲ್ಲಿಯೇ ನಿಧನಹೊಂದಿದರು. ಶ್ರವಣಬೆಳಗೊಳದ ಶಾಸನಗಳನ್ನೂ ಇವರು ಪರಿಷ್ಕರಿಸಿರುವುದು ಅಲ್ಲಿಯ ದಾಖಲೆಗಳಿಂದ ತಿಳಿದುಬರುತ್ತದೆ.

ಇ.ಪಿ. ರೈಸ್: ಎಡ್ವರ್ಡ್ ಪೀಟರ್ ರೈಸ್‌ರವರು ಇಂಗ್ಲೆಂಡಿನ ಹ್ಯಾರೋ ಪಟ್ಟಣದಲ್ಲಿ ಜನಿಸಿದರು. ಇವರ ತಂದೆ ಬೆಂಜಮಿನ್ ಹಾಲ್ಬರೊ ಲಂಡನ್ ಮಿಷನರಿಯಲ್ಲಿ ಕೆಲಸ ಮಾಡುತ್ತಿದ್ದರು. ಚಿಕ್ಕಂದಿನಿಂದಲೇ ಬೆಂಗಳೂರಿನಲ್ಲಿ ಬೆಳೆದ ರೈಸ್ ಇಂಗ್ಲಿಷಿನೊಂದಿಗೆ ಕನ್ನಡ ಭಾಷೆಯನ್ನೂ ಅಭ್ಯಾಸ ಮಾಡಿದರು. ಕ್ರೈಸ್ತ ಮತಪ್ರಚಾರಕರಾಗಿ ೧೮೭೩ರಿಂದ ೧೮೯೫ರವರೆಗೆ ಕೆಲಸ ಮಾಡಿದ ರೈಸ್ ಲಂಡನ್ ಮಿಷನರಿ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿ ದುಡಿಯುತ್ತಿದ್ದರು.

'ಹಳೆಯ ಒಡಂಬಡಿಕೆ'ಯನ್ನೂ 'ಮೋಶೆಯ ಧರ್ಮಶಾಸ್ತ್ರದ ಆದಿಕಾಂಡ'ವನ್ನೂ ತಿಳಿಗನ್ನಡದಲ್ಲಿ ರಚಿಸಿದರು. ಇವರು ಪ್ರಕಟಿಸಿದ 'ಎ ಹಿಸ್ಟರಿ ಆಫ್ ಕೆನರೀಸ್ ಲಿಟರೇಚರ್' ಎಂಬುದು ಇಂಗ್ಲಿಷ್‌ನಲ್ಲಿ ರಚಿತವಾದ ಮೊದಲ ಕನ್ನಡ ಸಾಹಿತ್ಯ ಚರಿತ್ರೆ. ಈ ಗ್ರಂಥದಲ್ಲಿ ಜೈನ, ವೀರಶೈವ, ವೈಷ್ಣವ ಮತ್ತು ಆಧುನಿಕ ಎಂದು ನಾಲ್ಕು ವಿಭಾಗಗಳಾಗಿ ಕರ್ನಾಟಕದ ಇತಿಹಾಸದ ಸ್ಥೂಲ ಪರಿಚಯ ಕೊಡಲಾಗಿದೆ. ಸಾಹಿತ್ಯಸೇವೆ ಮಾತ್ರವಲ್ಲದೆ ಕನ್ನಡದ ಜನತೆಯೊಂದಿಗೆ ಸ್ನೇಹವನ್ನೂ, ಆತ್ಮೀಯತೆಯನ್ನೂ ಬೆಳೆಸಿಕೊಂಡಿದ್ದ ಇ.ಪಿ. ರೈಸ್ ಅವರು ಜನರ ಕಷ್ಟಗಳನ್ನು ಆಲಿಸಿ ಅವರ ದುಃಖವನ್ನು ದೂರ ಗೊಳಿಸಲು ತಮ್ಮಿಂದ ಕೈಲಾದಷ್ಟು ಸಹಾಯ ಮಾಡುತ್ತಿದ್ದರು.

ಹರ್ಮನ್ ಮೋಗ್ಲಿಂಗ್ : ಇವರು ಕನ್ನಡ ಭಾಷೆಗಾಗಿ ದುಡಿದ ಮತ್ತೊಬ್ಬ ಜರ್ಮನ್ ವಿದ್ವಾಂಸರು. ಅತಿ ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ತಾಯ್ನಾಡಲ್ಲಿ ಡಾಕ್ಟರೇಟ್ ಪಡೆದು ೧೮೩೬ರಲ್ಲಿ ಕ್ರೈಸ್ತಧರ್ಮ ಪ್ರಚಾರಕನಾಗಿ ಭಾರತಕ್ಕೆ ಬಂದರು. ಮಂಗಳೂರು, ಧಾರವಾಡ, ಹುಬ್ಬಳ್ಳಿ ಮತ್ತು ಕೊಡಗು ಪ್ರದೇಶಗಳಲ್ಲಿ ಸಂಚರಿಸಿ ಜನಮನವನ್ನು ತಿಳಿದುಕೊಂಡು, ಕನ್ನಡ ಭಾಷೆಯತ್ತ ಆಕರ್ಷಿತನಾಗಿ ಅತ್ಯಲ್ಪ ಕಾಲದ ಅಭ್ಯಾಸದಿಂದಲೇ ಈ ಭಾಷೆಯಲ್ಲಿ ಪಾಂಡಿತ್ಯ ಪಡೆಯುವಷ್ಟು ಆಸಕ್ತಿ ಇವರಲ್ಲಿತ್ತು. ಈತ ರಚಿಸಿದ ಕ್ರೈಸ್ತ ಗೀತೆಗಳೊಂದಿಗೆ 'ಜಾತಿ ವಿಚಾರಣೆ', 'ದೇವ ವಿಚಾರಣೆ' ಎಂಬ ಪುಸ್ತಕಗಳು ಹೊಸಗನ್ನಡದ ಆದ್ಯ ಪ್ರಬಂಧಗಳೆಂದು ಹೆಸರುಗಳಿಸಿವೆ. 'ಈರಾರಾ ಪತ್ರಿಕೆ' ಎಂಬ ೧೨ ಪುಟಗಳ ಪುಟ್ಟ ಪುಸ್ತಕವನ್ನೂ ಇವರು ರಚಿಸಿದ್ದಾರೆ. 'ಪಿಲ್ಗ್ರಿಮ್ಸ್ ಪ್ರೋಗ್ರೆಸ್' ಎಂಬ ಪುಸ್ತಕವನ್ನು 'ಯಾತ್ರಿಕನ ಸಂಚಾರ' ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ. ೧೮೪೮ರಲ್ಲಿ ಜೈಮಿನಿ ಭಾರತವನ್ನೂ, ತೊರವೆಯ ರಾಮಾಯಣವನ್ನೂ, 'ಬಿಬ್ಲಿಯೋಥಿಕ ಕರ್ನಾಟಕ' ಮಾಲೆಯಲ್ಲಿ ಅಚ್ಚು ಮಾಡಿದರು. ೧೮೫೦ರಲ್ಲಿ ೧೦೦ ಹಾಡುಗಳುಳ್ಳ 'ದಾಸರ ಪದಗಳು' ಎಂಬ ಕೃತಿಯನ್ನು ಹೊರತಂದು, ಕನಕದಾಸರ ಹರಿಭಕ್ತಿಸಾರ, ಕುಮಾರವ್ಯಾಸ ಭಾರತ, ಬಸವಪುರಾಣ, ಚನ್ನಬಸವಪುರಾಣ ಮೊದಲಾದ ಕಾವ್ಯಗಳನ್ನೂ ಅಚ್ಚು ಮಾಡಿದರು.

೧೮೪೭ರಲ್ಲಿ ಮೋಗ್ಲಿಂಗ್ ಕನ್ನಡ ಗಾದೆಗಳ ಬೃಹತ್ ಸಂಗ್ರಹವನ್ನು ಹೊರತಂದರು. ಇದರಲ್ಲಿ ೩೫೪೭ ಗಾದೆಗಳ ಸಂಗ್ರಹವಿದೆ. ೧೮೪೩ರಲ್ಲಿ 'ಮಂಗಳೂರ ಸಮಾಚಾರ' ಎಂಬ ಪತ್ರಿಕೆಯ ಸಂಪಾದಕತ್ವವನ್ನು ನಿರ್ವಹಿಸಿ ಕನ್ನಡದ ಮೊದಲ ಪತ್ರಿಕೆಯ ಸ್ಥಾಪಕನೆಂದು ಹೆಸರುಪಡೆದರು. ಇವರಿಗೆ ಕೊಡಗಿನ ಇತಿಹಾಸದಲ್ಲಿ ವಿಶೇಷ ಆಸಕ್ತಿ ಇದ್ದು 'ರಾಜೇಂದ್ರನಾಮೆ' ಎಂಬ ಗ್ರಂಥವನ್ನು ಪ್ರಕಟಿಸಿದರು. ತಮ್ಮ ಸ್ವದೇಶಕ್ಕೆ ಹಿಂತಿರುಗಿದ ಮೇಲೂ ಕನ್ನಡಕ್ಕಾಗಿ ಅಲ್ಲಿಂದಲೇ ದುಡಿಯುತ್ತಿದ್ದರು. ದಾಸರ ಪದಗಳಲ್ಲಿ ಹಲವನ್ನು ಆಯ್ದುಕೊಂಡು ಜರ್ಮನ್ ಭಾಷೆಗೆ ತರ್ಜುಮೆ ಮಾಡಿಸಿ, ಸುದೀರ್ಘ ಪೀಠಿಕೆಯೊಂದಿಗೆ ಜರ್ಮನ್ ಪತ್ರಿಕೆಗಳಲ್ಲಿ ಈ ಪದಗಳನ್ನು ಪ್ರಕಟಿಸಿ, ಅರ್ಥಗಳನ್ನು ವಿವರಿಸಿದುದು ಇವರ ಕನ್ನಡಾಭಿಮಾನಕ್ಕೆ ಸಾಕ್ಷಿ. ತುಳು ಪಾಡ್ದನಗಳನ್ನೂ ಇವರು ಸಂಗ್ರಹಿಸಿದ್ದರು.



ರೆವರೆಂಡ್ ಉತ್ತಂಗಿ ಚೆನ್ನಪ್ಪ: ಇವರ ಪೂರ್ವಜರು ಬಳ್ಳಾರಿ ಜಿಲ್ಲೆಯ ಉತ್ತಂಗಿಯವರು. ವೀರಶೈವ ಧರ್ಮದಿಂದ ಕ್ರೈಸ್ತ ಧರ್ಮಕ್ಕೆ ಮತಾಂತರ ಗೊಂಡು ಈ ಕುಟುಂಬ ಅನಂತರ ಧಾರವಾಡದಲ್ಲಿ ನೆಲೆಸಿತು. ತಂದೆ ದಾನಿಯೇಲಪ್ಪನವರು ಪ್ರಾಥಮಿಕ ಶಾಲಾ ಶಿಕ್ಷಕರು. ಧಾರವಾಡ, ಗದಗ ಮತ್ತು ಬೆಟಗೇರಿಯಲ್ಲಿ ಚನ್ನಪ್ಪನವರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ನಡೆಯಿತು. ೧೮೮೧ರ ಡಿಸೆಂಬರ್ ೯ರಂದು ಜನಿಸಿದ ಇವರು ಪ್ರಾಥಮಿಕ ಶಿಕ್ಷಣದಲ್ಲಿಯೇ ತಮ್ಮ ಹದಿವಯಸ್ಸನ್ನು ಕಳೆದರು. ಬುದ್ಧಿವಂತರಾದರೂ ಏಕೋ ಏನೋ ಶಾಲಾ ವ್ಯಾಸಂಗದಲ್ಲಿ ಆಸಕ್ತಿ ವಹಿಸಲಿಲ್ಲ. ಇವರು ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ಯಂತ್ರವಿಜ್ಞಾನದಲ್ಲಿ ಇವರಿಗೆ ಆಸಕ್ತಿಯಿತ್ತು. ಆದರೆ ಆ ಹಾದಿ ಇವರಿಗೆ ಸುಗಮವಾಗಿರಲಿಲ್ಲ. ಬಡ ಪ್ರಾಥಮಿಕ ಶಾಲಾ ಉಪಾಧ್ಯಾಯನ ಮಗನಿಗೆ ಈ ಕನಸು ನನಸಾಗುವಂತಿರಲಿಲ್ಲ. ಕಿತ್ತು ತಿನ್ನುತ್ತಿದ್ದ ಬಡತನದ ಸಂಕೋಲೆಯನ್ನು ಹರಿದು, ತಾಯ ಆಣತಿಯಂತೆ, ಕ್ರೈಸ್ತ ಮಿಷನರಿ ಸಂಸ್ಥೆಯನ್ನು ಸೇರಿ ಉನ್ನತ ವ್ಯಾಸಂಗ ನಡೆಸಿದರು. ಚಿಕ್ಕಂದಿನಿಂದಲೂ ಚೆನ್ನಪ್ಪನವರಲ್ಲಿ ಧಾರ್ಮಿಕ ಶ್ರದ್ಧೆ ಇತ್ತು. ತತ್ವಶಾಸ್ತ್ರದಲ್ಲಿ ಆಸಕ್ತಿ ಇದ್ದುದರಿಂದ ಉಪನಿಷತ್ತು, ಭಗವದ್ಗೀತೆಗಳನ್ನೂ, ಕ್ರೈಸ್ತ ಧರ್ಮಶಾಸ್ತ್ರಗಳನ್ನೂ ಒಟ್ಟಿಗೇ ಅಧ್ಯಯನ ಮಾಡತೊಡಗಿದರು. ಪ್ಲೇಟೊ, ಕ್ಯಾಂಟ್, ಬ್ರಾಡ್ಲೆ, ವಿಲಿಯಂ ಜೇಮ್ಸ್‌ರವರ ಗ್ರಂಥಗಳನ್ನೂ ಅಧ್ಯಯನ ಮಾಡಿ ವಿಚಾರಶಕ್ತಿಯನ್ನು ವೃದ್ಧಿಪಡಿಸಿಕೊಂಡರು.

೧೯೧೫ರಲ್ಲಿ ಬರವಣಿಗೆ ಕೈಗೊಂಡ ರೆವರೆಂಡ್ ಚೆನ್ನಪ್ಪನವರು ೧೮ ಕೃತಿಗಳನ್ನು ರಚಿಸಿದರು. ಅವುಗಳನ್ನು ಕನ್ನಡ ಸಾಹಿತ್ಯ ಮತ್ತು ಭಾರತೀಯತೆಗೆ ಸಂಬಂಧಿಸಿದ ಗ್ರಂಥಗಳೆಂದೂ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಗ್ರಂಥಗಳೆಂದೂ ಎರಡು ಭಾಗಗಳಾಗಿ ವಿಭಜಿಸಬಹುದು. ೧೯೨೧ರಲ್ಲಿ ಇವರು ರಚಿಸಿದ, 'ಬನಾರಸಕ್ಕೆ ಬೆತ್ಲೆಹೇಮಿನ ವಿನಂತಿ' ಪುಸ್ತಕದಲ್ಲಿ ಏಸುಕ್ರಿಸ್ತನ ಜೀವನವನ್ನು ಸರಳಸುಂದರವಾಗಿ ನಿರೂಪಿಸಿದ್ದಾರೆ. ಏಸುಕ್ರಿಸ್ತನ ಜೀವನವನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿ ಬರೆದ ಗ್ರಂಥವಿದು. ಮತೀಯ ಭಾವನೆಗಳಿಂದ ದೂರವುಳಿದು ಸಾಹಿತ್ಯಾರಾಧನೆಯೇ ಇವರ ಮೂಲ ಉದ್ದೇಶವಾಯಿತು. ಭಾರತದಲ್ಲಿನ ಜಾತಿಭೇದವನ್ನು ಆಳವಾಗಿ ಅಧ್ಯಯನ ಮಾಡಿ ಬರೆದ ಗ್ರಂಥ 'ಹಿಂದೂ ಸಮಾಜದ ಹಿತಚಿಂತಕ'. 'ಮಕ್ಕಳ ಶಿಕ್ಷಣಪಟ' ಪುಸ್ತಕವು ಮಕ್ಕಳ ಶಿಕ್ಷಣಕ್ಕೆ ಇವರಿತ್ತ ಶ್ರೀಮಂತ ಕೊಡುಗೆ. 'ತಿರುಳ್ಗನ್ನಡ ತಿರುಕ' ಇವರ ಕಾವ್ಯನಾಮ.

ಚೆನ್ನಪ್ಪನವರಿಗೆ ಸಾಹಿತ್ಯರಂಗದಲ್ಲಿ ಶಾಶ್ವತ ಕೀರ್ತಿ ತಂದುಕೊಟ್ಟಿದ್ದು ಇವರ 'ಸರ್ವಜ್ಞ ವಚನಗಳು' ಎಂಬ ಸಂಪಾದಿತ ಗ್ರಂಥ. ಅಸ್ತವ್ಯಸ್ತವಾಗಿ ಚದುರಿಹೋಗಿದ್ದ ಸರ್ವಜ್ಞನ ವಚನಗಳನ್ನು ಕ್ರಮಬದ್ಧವಾಗಿ ಅಣಿಗೊಳಿಸಿ ಅವನ ಅಮರ ವಾಣಿಯನ್ನು, ಸಮಗ್ರ ಸರ್ವಜ್ಞ ದರ್ಶನವನ್ನೂ ಕನ್ನಡದ ಮನೆಮನೆಗೂ ಲಭ್ಯವಾಗುವಂತೆ ಮಾಡಿದ ಕೀರ್ತಿ ಇವರದು. ಈ ಗ್ರಂಥಕ್ಕಾಗಿ ದುಡಿದು ಒಂಬತ್ತು ವರ್ಷಗಳ ಸುದೀರ್ಘ ಕಾಲ ಸರ್ವಜ್ಞನ ಪೂರ್ವೋತ್ತರ ಮತ್ತು ವ್ಯಕ್ತಿತ್ವವನ್ನು ಜನತೆಗೆ ತಿಳಿಯುವ ಹಾಗೆ ೧೦೮ ಪುಟಗಳಲ್ಲಿ ವಿವರಿಸಿದ್ದಾರೆ. ಈ ವಚನಗಳಲ್ಲಿ ಪಾರಮಾರ್ಥಿಕ, ನೈತಿಕ ಮತ್ತು ಲೌಕಿಕವೆಂದು ಮೂರು ಭಾಗಗಳ ವಿಭಜನೆಯಿದೆ. ಈ ಕೃತಿ ಬಹುಬೇಗ ಜನಪ್ರಿಯವಾಯಿತು. ಸರ್ಕಾರವು ಈ ಗ್ರಂಥದ ಸ್ವಾಮ್ಯ ಪಡೆದು ಸುಲಭ ಬೆಲೆ ಆವೃತ್ತಿಯ ಮಾಲೆಯಲ್ಲಿ ಪ್ರಕಟಿಸಿತು. ಈ ಗ್ರಂಥ ೧೮ ಪುಟಗಳ ಲಘು ಟಿಪ್ಪಣಿ, ೧೩೦ ಪುಟಗಳ ವಿಶೇಷ ಟಿಪ್ಪಣಿ ಮತ್ತು ವಚನಗಳ ಅಕಾರಾದಿಯನ್ನು ಒಳಗೊಂಡಿದೆ. ಸಾಹಿತ್ಯ ಆವೃತ್ತಿ, ಜೇಬಿನ ಆವೃತ್ತಿ, ಜನಪದ ಆವೃತ್ತಿ ಮತ್ತು ಅಗ್ಗದ ಆವೃತ್ತಿ ಎಂದು ನಾಲ್ಕು ಆವೃತ್ತಿಗಳನ್ನು ಕಂಡ ಏಕೈಕ ಗ್ರಂಥವಿದು.

'ದೃಷ್ಟಾಂತದರ್ಪಣ' ಇವರು ಅನುವಾದಿಸಿದ ಮತ್ತೊಂದು ಗ್ರಂಥ. ವೀರಶೈವಧರ್ಮ ಮತ್ತು ಸಿದ್ಧಾಂತಗಳಲ್ಲಿ ಪರಿಶ್ರಮ ಪಡೆದಿದ್ದ ಇವರು ಮೋಳಿಗೆ ಮಾರಯ್ಯ, ರಾಣಿ ಮಹಾದೇವಿಯ ವಚನಗಳು ಮತ್ತು ಆದಯ್ಯನ ವಚನಗಳು ಎಂಬ ಗ್ರಂಥಗಳನ್ನು ಸಂಪಾದಿಸಿದರು. ಇವರು ರಚಿಸಿರುವ 'ಸಿದ್ಧರಾಮ ಸಾಹಿತ್ಯ ಸಂಗ್ರಹ' ಗ್ರಂಥ ಇವರ ಸಂಶೋಧನೆಗೆ ಸಾಕ್ಷಿ. ಇದಕ್ಕೆ ದೇವರಾಜ ಬಹದ್ದೂರ್ ದತ್ತಿ ಬಹುಮಾನ ಲಭಿಸಿದೆ. 'ಅನುಭವ ಮಂಟಪ – ಹಾರ್ಟ್ ಆಫ್ ಲಿಂಗಾಯತ್ ರಿಲಿಜನ್' ಇವರು ಇಂಗ್ಲಿಷ್‌ನಲ್ಲಿ ರಚಿಸಿದ ಗ್ರಂಥ. ನಾಡು ಮತ್ತು ನುಡಿಯ ಸೇವೆ ಮಾಡಿದ ಚೆನ್ನಪ್ಪನವರನ್ನು ೧೯೪೯ರಲ್ಲಿ ಗುಲ್ಬರ್ಗದಲ್ಲಿ ನಡೆದ ೩೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಲಾಯಿತು.

ಚೆನ್ನಪ್ಪನವರು ತೀರಿಕೊಂಡ ಮೇಲೆ ಅವರ 'ಮೃತ್ಯುಂಜಯ' ಮತ್ತು 'ಲಿಂಗಾಯಿತ ಧರ್ಮ ಮತ್ತು ಕ್ರೈಸ್ತ ಧರ್ಮ' ಎಂಬ ಗ್ರಂಥಗಳು ಪ್ರಕಟಗೊಂಡವು. ತುಲನಾತ್ಮಕ ವಿಮರ್ಶೆ ಮಾಡಿರುವ ಈ ಗ್ರಂಥವು ಎರಡು ಧರ್ಮಗಳ ಸಮನ್ವಯತೆ, ಸೌಹಾರ್ದತೆಯನ್ನು ಬೆಳೆಸುವ ಸುಂದರ ಗ್ರಂಥ. ಕೋಮುದಳ್ಳುರಿಯಿಂದ ಮನುಜನನ್ನು ಮೇಲೆತ್ತುವ ನಿಟ್ಟಿನಲ್ಲಿ ಚನ್ನಪ್ಪನವರು ಈ ಕೃತಿಯಲ್ಲಿ ಮಾನವೀಯತೆಗೆ ಕರೆಯಿತ್ತಿದ್ದಾರೆ.

ಸಾಧುಸಂತರು ನೊಂದಾಗ

ಒಂದು ಸಲ ಸುಬೋಧಾನಂದರು ಕೊಲ್ಕತಾದಿಂದ ಬೇಲೂರು ಮಠಕ್ಕೆ ದೋಣಿಯಲ್ಲಿ ಹೋಗುತ್ತಿದ್ದಾಗ ಬಾಲಿ ಪ್ರದೇಶದ ಕೆಲವು ಯುವಕರು ವಿವೇಕಾನಂದರನ್ನು ಟೀಕಿಸಲು ಪ್ರಾರಂಭಿಸಿದರು. ಸುಬೋಧಾನಂದರು ಅವರಿಗೆ "ನೀವು ಬೇಲೂರು ಮಠಕ್ಕೆ ದೇಣಿಗೆಯನ್ನೇನಾದರೂ ಕೊಡುತ್ತಿರುವಿರೇನು? ಕೊಡುತ್ತಿದ್ದರೆ ಅದನ್ನು ಇಂದಿನಿಂದ ನಿಲ್ಲಿಸಿಬಿಡಿ. ಸ್ವಾಮೀಜಿಯನ್ನು ಟೀಕಿಸಿ ನೀವು ಸಾಧಿಸುತ್ತಿರುವುದಾದರೂ ಏನು?" ಎಂದು ಕೇಳಿದರು. ಆ ತರುಣರು ಬೇಲೂರು ಮಠಕ್ಕೆ ಸಹಾಯವನ್ನೇನೂ ಮಾಡುತ್ತಿಲ್ಲ ಎಂದು ತಿಳಿದಮೇಲೆ ಸುಬೋಧಾನಂದರು, "ಹಾಗಿದ್ದ ಮೇಲೆ ಅನವಶ್ಯಕವಾಗಿ ಏಕೆ ಟೀಕಿಸುವಿರಿ? ನಿಮಗೆ ಸಂನ್ಯಾಸಿಗಳನ್ನು ಗೌರವಿಸುವುದು ತಿಳಿದಿದೆಯೆ? ಇಂಗ್ಲಿಷ್ ಅಧಿಕಾರಿಗಳ ಕೈಕೆಳಗೆ ಜೀತದಾಳಾಗಿ ದುಡಿಯುವ ನಿಮಗೆ ಕೇವಲ ಅವರನ್ನು ಹೊಗಳುತ್ತಿರುವುದೆ ಅಭ್ಯಾಸವಾಗಿದೆ. ತಪ್ಪು ಮಾಡಿದರೆ ಅವರು ನಿಮ್ಮನ್ನು ಬೂಟಿನಿಂದ ಒದೆಯುವರು" ಎಂದರು. ಕೆಲವು ದಿನಗಳ ನಂತರ ಆ ತರುಣರಲ್ಲಿ ಒಬ್ಬನು ಬೇಲೂರು ಮಠಕ್ಕೆ ಬಂದು ಸುಬೋಧಾನಂದರಿಗೆ "ಮಹಾರಾಜ್, ಆ ದಿನ ತಿಳಿಯದೆ ನಾವು ತಪ್ಪು ಮಾಡಿದೆವು. ನಿಮ್ಮ ಮಾತು ನಿಜವಾಯಿತು. ನಮ್ಮಲ್ಲಿ ಒಬ್ಬನನ್ನು ಇಂಗ್ಲಿಷ್ ಅಧಿಕಾರಿಯು ಕಛೇರಿಯಿಂದ ಒದ್ದೋಡಿಸಿದನು" ಎಂದನು.

ಸ್ವಾಮಿ ಸುಬೋಧಾನಂದಜ

ತ್ರಿವೇಣೀ ದರ್ಶನ

ಅಲಹಾಬಾದಿನಲಿದ್ದ ಮೊದಲ ದಿನಗಳಲ್ಲಿ ವಿಜ್ಞಾನಾನಂದರು ನಿತ್ಯವೂ ಸೂರ್ಯೋದಯದ ಹೊತ್ತಿಗೆ ತ್ರಿವೇಣಿಗೆ ಸ್ನಾನಕ್ಕೆ ಹೋಗುತ್ತಿದ್ದರು. ಒಂದು ದಿನ ಸ್ನಾನಮಾಡಿ ಗಂಗಾಸ್ತೋತ್ರವೊಂದನ್ನು ಹೇಳಿಕೊಳ್ಳುತ್ತಿರುವಾಗ, ಅವರಿಗೆ ಒಂದು ದರ್ಶನವಾಯಿತು. ತಾಯಿ ತ್ರಿವೇಣೀ ದೇವಿಯು ಮೂರು ಕಾಲಿನ ಜಡೆಗಳುಳ್ಳ ಚಿಕ್ಕ ಸುಂದರ ಹುಡುಗಿಯಾಗಿ ಕಾಣಿಸಿಕೊಂಡು ಮತ್ತೆ ನೀರಿನಲ್ಲಿ ಅದೃಶ್ಯಳಾದಳು. ಅವರ ಮನಸ್ಸೆಲ್ಲವೂ ಆ ದರ್ಶನದಿಂದಲೇ ತುಂಬಿಹೋಯಿತು. ಸ್ತೋತ್ರಪಠಣವಾದಮೇಲೆ ಆಶ್ರಮಕ್ಕೆ ಹಿಂದಿರುಗುವಾಗ, ಮತ್ತೊಮ್ಮೆ ತಾಯಿ ತ್ರಿವೇಣಿ ತನ್ನ ಮೂರು ಕಾಲಿನ ಜಡೆಯನ್ನು ಕುಣಿಸುತ್ತ ಅದೇ ದಿಕ್ಕಿನಲ್ಲಿ ನಡೆಯುತ್ತಿರುವಂತೆ ಕಾಣಿಸಿತು. ಸ್ವಲ್ಪ ಹೊತ್ತಾದ ಮೇಲೆ ಅವಳು ಅದೃಶ್ಯಳಾದಳು. ಈ ದರ್ಶನದ ವಿಚಾರ ತಿಳಿದ ಬ್ರಹ್ಮಾನಂದರು ಅದನ್ನು ನಿಜವಾದದ್ದೆಂದು ಖಚಿತಪಡಿಸಿದರು. ವಿಜ್ಞಾನಾನಂದರೇ ಆ ನಂತರ ಹೇಳಿದರು: "ದರ್ಶನವು ಮನಸ್ಸಿನಲ್ಲಿ ಶಾಶ್ವತವಾದ ಆಧ್ಯಾತ್ಮಿಕ ಆನಂದವನ್ನೂ ಜಾಗೃತಿಯನ್ನೂ ಉಂಟುಮಾಡುವುದೇ ಅದು ನಿಜವೆಂಬುದಕ್ಕೆ ಸಾಕ್ಷಿ. ಜಗನ್ಮಾತೆಯ ಆ ಕನ್ಯಾರೂಪವನ್ನು ಕುರಿತು ಯೋಚಿಸಿದರೆ ನನಗೆ ಈಗಲೂ ಆನಂದವಾಗುತ್ತದೆ."

ಸ್ವಾಮಿ ವಿಜ್ಞಾನಾನಂದಜ

ಪ್ರೇಮದಿಂದ ಪರಿವರ್ತನೆ

ಪ್ರೀತಿಗೆ ಯಾವ ತಪ್ಪೂ ಕಾಣಿಸದು. ಕೊಲ್ಕತ್ತದ ದೊಡ್ಡ ಮನೆತನದ ಹುಡುಗನೊಬ್ಬ ಕೆಟ್ಟ ಸಹವಾಸಕ್ಕೆ ಬಿದ್ದು ಮಾದಕವಸ್ತು ಸೇವನೆಯ ಅಭ್ಯಾಸ ಮಾಡಿಕೊಂಡಿದ್ದ. ಇದರಿಂದ ನೊಂದ ಆತನ ಸಂಬಂಧಿಕರು ಅವನನ್ನು ಸರಿದಾರಿಗೆ ತರುವುದಕ್ಕೆ ಎಷ್ಟೇ ಪ್ರಯತ್ನಪಟ್ಟರೂ ಸಾಧ್ಯವಾಗಿರಲಿಲ್ಲ. ಸನ್ಯಾಸಿಯಾಗಿದ್ದ ಅವನ ಅಣ್ಣ ಕೊನೆಯ ಪ್ರಯತ್ನವೆಂದು ಪ್ರೇಮಾನಂದರ ಸಹಾಯ ಬೇಡಿದ. ಪ್ರೇಮಾನಂದರು ಕಥೆಯೆಲ್ಲವನ್ನೂ ಶಾಂತವಾಗಿ ಕೇಳಿದರು. ಅನಂತರ ಹುಡುಗನನ್ನು ನೋಡಲು ಹೋದರು. ತುಂಬ ಹೊತ್ತು ಅವನೊಂದಿಗೆ ಮಾತನಾಡಿದ ಮೇಲೆ ಮಾರನೆಯ ದಿನ ಮಠಕ್ಕೆ ಬರಲು ಅವನನ್ನು ಒಪ್ಪಿಸಲು ಸಾಧ್ಯವಾಯಿತು. ಅಂತೆಯೇ ಅವನು ಬಂದ. ಅನಂತರ ಹಾಗೆಯೇ ಅನೇಕ ಬಾರಿ ಮಠಕ್ಕೆ ಬರುವುದಕ್ಕಾರಂಭಿಸಿದ. ಕ್ರಮೇಣ ಪ್ರೇಮಾನಂದರ ಆಧ್ಯಾತ್ಮಿಕ ಪ್ರಭಾವದಿಂದ ಅವನ ಶೀಲ ಪರಿವರ್ತನೆಯಾಗಲಾರಂಭಿಸಿತು. "ಅದೆಷ್ಟು ಮೃದುವಾಗಿ ನನ್ನ ಮೇಲೆ ಅವರು ವಿಶ್ವಾಸದ ಮಳೆಗರೆದರು! ನನ್ನ ಗೆಳೆಯರು, ಸಂಬಂಧಿಕರು ಎಲ್ಲರೂ ನನ್ನ ಕೈಬಿಟ್ಟಿದ್ದರು; ಆದರೆ ಅವರ ಪ್ರೇಮ ನನ್ನನ್ನು ಮೇಲಕ್ಕೆತ್ತಿತು. ಅವರಿಗೆ ನನ್ನ ಎಲ್ಲ ಕೆಟ್ಟತನಗಳೂ ತಿಳಿದಿದ್ದವು; ಆದರೂ ಅವರು ನನ್ನನ್ನು ಪ್ರೀತಿಸಿದರು!" ಎಂದು ಅನಂತರ ಅವನು ಸ್ಮರಿಸಿಕೊಂಡ. ಕೊನೆಗೆ ಅವನು ಲೌಕಿಕ ಜೀವನವನ್ನು ತ್ಯಜಿಸಿ, ರಾಮಕೃಷ್ಣ ಮಹಾಸಂಘದಲ್ಲಿ ಸನ್ಯಾಸಿಯಾದ.

ಸ್ವಾಮಿ ಪ್ರೇಮಾನಂದಜ